ಚಿತ್ರಗಳು: ವೆಂಕಟ್ರಮಣ ಭಟ್



ರಾಂಚಿಯ ದೀಪಾ ಟೋಲಿ. ಅಲ್ಲಿಂದ ನಾಲ್ಕು ಹೆಜ್ಜೆ ಇಟ್ಟರೆ ನಾನು ವಾಸವಾಗಿರುವ ಅಪಾರ್ಟ್‌ಮೆಂಟ್. ಹೆಸರು 'ಶಿಕ್ಷಿತ'. ಎಷ್ಟೆಂದರೂ ಓದಿದವಳಲ್ಲವೇ! ಡಬಲ್ ಮಾಸ್ಟರ್ ಡಿಗ್ರಿ, ಒಂದು ಪಿಎಚ್.ಡಿ.! ಅದೂ ಮೂವತ್ತು ವರ್ಷಗಳ ಹಿಂದೆ! ವೃತ್ತಿಯಲ್ಲಿ ಕಾಲೇಜಿನ ಹಿರಿಯ ಉಪನ್ಯಾಸಕಿ; ಸಮಾಜಶಾಸ್ತ್ರ ವಿಷಯ ಬೇರೆ!

ಮನೆಯಿಂದ ಸ್ವಲ್ಪ ದೂರ ನಡೆದುಕೊಂಡು ಹೋದರೆ ಅಲ್ಲಿಯೇ ಇದೆ ಒಂದು ಸಣ್ಣ ತರಕಾರಿ ಮಾರುಕಟ್ಟೆ. ವಾರಕ್ಕೊಮ್ಮೆಯಾದರೂ ಅಲ್ಲಿಗೆ ಹೋಗುತ್ತೇನೆ. ಸುತ್ತಮುತ್ತಲಿನ ಹಳ್ಳಿಯವರು ಬೆಳಿಗ್ಗೆಯೇ ತಾಜಾ ತರಕಾರಿಗಳನ್ನು ತಂದು ಮಾರುವುದಕ್ಕೆ ಕುಳಿತುಕೊಳ್ಳುತ್ತಾರೆ; ಸೂರ್ಯ ಮುಳುಗುವವರೆಗೂ, ತರಕಾರಿ ಬಾಡುವವರೆಗೂ, ತಮ್ಮ ಮುಖ ಆಯಾಸದಿಂದ ಬಾಡುವುದನ್ನೂ ಪರಿಗಣಿಸದೆಯೇ ಮಾರಾಟ ಮಾಡುತ್ತಾರೆ. ಅಲ್ಲಿ ನನಗೊಬ್ಬಳು ತರಕಾರಿ ಮಾರುವವಳು ಪರಿಚಯವಾಗಿದ್ದಾಳೆ, ಬಹಳ ದಿನಗಳ ಹಿಂದೆ. ನಾನು ತರಕಾರಿ ಖರೀದಿಸುವುದು ಆಕೆಯ ಬಳಿಯೇ. ಸ್ವಲ್ಪ ಕಡಿಮೆ ಬೆಲೆಗೆ, ತಾಜಾ ತರಕಾರಿಯನ್ನೇ ನೀಡುತ್ತಾಳೆ.

ಒಂದು ವೇಳೆ ನಾನು ಅವಳ ಬಳಿಗೆ ಹೋದ ಸಂದರ್ಭದಲ್ಲಿ ಹೆಚ್ಚು ಗಿರಾಕಿಗಳು ಇಲ್ಲದಿದ್ದರೆ ಆಕೆಯನ್ನು ಮಾತಿಗೆಳೆಯುತ್ತೇನೆ. ಮನೆಯಲ್ಲಿನ ಏಕತಾನತೆಯನ್ನು ಮರೆಯುವುದಕ್ಕೆ ಪ್ರಯತ್ನಿಸುತ್ತೇನೆ. ನಾನು ಹೆಚ್ಚು ಹೊತ್ತು ಮಾತನಾಡಿದರೆ, ಆಕೆ ನೀಡುವ ಉತ್ತರ, ಪ್ರತಿಕ್ರಿಯೆ ಚುಟುಕು. ನಾನು ಹತ್ತು ವಾಕ್ಯಗಳ ಮಾತಿನ ಬಾಣ ಬಿಟ್ಟರೆ ಆಕೆಯ ಬತ್ತಳಿಕೆಯಿಂದ ಹೊರಬರುತ್ತಿದ್ದುದು ಕೇವಲ ಒಂದೇ ಬಾಣ; ಸ್ವಲ್ಪ ಮೊನಚು.

ದುಂಡು ಮುಖ, ಎಣ್ಣೆಗಪ್ಪು ಬಣ್ಣ, ದೊಡ್ಡ ದೊಡ್ಡ ಸುಂದರ ಕಣ್ಣುಗಳು, ಸ್ವಲ್ಪವೇ ಸ್ವಲ್ಪ ಎನ್ನುವಷ್ಟು ಉಬ್ಬಿದಂತಿರುವ ಹಲ್ಲುಗಳು,